ಕಾರ್ಖಾನೆಯು ರೈತರ ಕಬ್ಬನ್ನು ಅರೆಯಲು ಸಾಧ್ಯವಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ, ಹೊಳಿಹೊನ್ನೂರು ವಿಭಾಗಕ್ಕೆ ಸಂಬಂಧಪಟ್ಟ ಮಂಗೋಟೆಯಲ್ಲಿ ಸಕ್ಕರೆ ಕಾರ್ಖಾನೆ ಸ್ಥಾಪನೆ ಮಾಡಲು ಸರ್ಕಾರದಿಂದ 25 ಎಕರೆ ಜಮೀನನ್ನು ಕಾದಿರಿಸಿರುವುದು ನಿಜವಲ್ಲವೆ, ಹಾಗಿದ್ದಲ್ಲಿ, ಇಲ್ಲಿ ಸರ್ಕಾರದವರು ಸಕ್ಕರೆ ಕಾರ್ಖಾನೆಯನ್ನು ತೆರೆಯಲಾಗುವುದೇ?

ಇ) ಹಾಗಿಲ್ಲದಿದ್ದಲ್ಲಿ, ಸಹಕಾರ ಸಂಘದವತಿಯಿಂದಾಗಲೀ ಅಥವಾ ಖಾಸಗಿಯವರಿಂದಾಗಲೀ ಅಥವಾ ಯಾವುದಾದರು ಕಂಪನಿಯಿಂದಾಗಲೀ ಕಾರ್ಖಾನೆ ಸ್ಥಾಪನೆ ಮಾಡಲು ಯೋಜನೆ ಮಾಡಲಾಗಿದೆಯೇ?

ಈ) ಮಾಡುವುದಿದ್ದರೆ, ಯಾವಾಗ, ಎಷ್ಟು ಅವಧಿಯೊಳಗೆ ಮಾಡಲಾಗುವುದು?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) :

ಅ) ಇಲ್ಲ.

ಆ) ಇಲ್ಲ. ಸಧ್ಯಕ್ಕೆ ಇದರ ಬಗ್ಗೆ ಸರ್ಕಾರದಲ್ಲಿ ಯಾವ ಪ್ರಸ್ತಾವನೆಯೂ ಬಂದಿರುವುದಿಲ್ಲ.

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

ಮಾರಾಟ ವ್ಯವಹಾರ ಇಲ್ಲದ ಚಿಕ್ಕ ಅಕ್ಕಿ ಗಿರಣಿಗಳಿಗೆ ಸೇಲ್ಸ್ ಟ್ಯಾಕ್ಸ್ ರಿಜಿಸ್ಟ್ರೇಶನ್ ವಿನಾಯತಿ

1488 - ಶ್ರೀ ಜಿ.ಎಸ್. ಆಚಾರ್ (ಬೈಂದೂರು) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಾರಾಟ ತೆರಿಗೆ ಇಲಾಖೆಯ ವ್ಯಾಪ್ತಿ ಮಾರಾಟ ಮಾಡುವವರಿಗೆ ಮಾತ್ರ ಸೀಮಿತವಲ್ಲವೇ.

ಆ) ಹಾಗಿದ್ದಲ್ಲಿ, ಯಾವುದೇ ಮಾರಾಟ ವ್ಯವಹಾರ ಮಾಡದೆ ಕೇವಲ ರೈತರ ಭತ್ತವನ್ನು ಬಾಡಿಗೆಗೆ ಅಕ್ಕಿ ಮಾಡಿಕೊಡುವ ಚಿಕ್ಕ ಅಕ್ಕಿ ಮಿಲ್(ಹಲ್ಲರ್)ಗಳವರು ಸಹಾ ಸೇಲ್ಸ್ ಟ್ಯಾಕ್ಸ್ ರಿಜಿಸ್ಟ್ರೇಷನ್ ಮಾಡಿಸಬೇಕೆಂಬ ನಿರ್ಬಂಧ ಇರುವುದೇಕೆ?

ಇ) ತೀರ ಚಿಕ್ಕ ಉದ್ದಿಮೆದಾರರಿಗೆ ಆಗುವ ಈ ರೀತಿಯ ಸಂಕಷ್ಟ ನಿವಾರಣೆಗೆ ಸರ್ಕಾರ ಸೂಕ್ತ ವಿನಾಯತಿ ನೀಡುವುದೇ?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು):

ಅ) ಹೌದು

ಆ) ಈ ಸರಕಿನಿಂದ ಸಮರ್ಪಕ ತೆರಿಗೆ ಪಾವತಿಯನ್ನು ಖಾತ್ರಿ ಪಡಿಸಿಕೊಳ್ಳಲೋಸುಗ, ಅಕ್ಕಿ ಮಿಲ್ಲಿನ ಮಾಲೀಕರು ಯಾವುದೇ ಖರೀದಿ ಅಥವಾ ಮಾರಾಟದ ವ್ಯವಹಾರವನ್ನು ಪರಿಗಣಿಸದ ಕ.ಮಾ.ತ. ಕಾಯಿದೆ 1957ರ ಅಡಿಯಲ್ಲಿ ನೋಂದಣಿ ಮಾಡಿಸಿಕೊಳ್ಳಬೇಕಾಗಿದೆ.

ಇ) ಈ ನಿಯಮದ ಪರಿಪಾಲನೆಯು ಯಾವುದೇ ಸಣ್ಣ ಅಕ್ಕಿ ಮಿಲ್ಲಿನ ಘಟಕಗಳ ಮಾಲೀಕರಿಗೆ ತೊಂದರೆಯಾಗುವ ರೀತಿಯಲ್ಲಿ ಪರ್ಯಾವಸಾನವಾಗದಿರುವ ಹಾಗೆ ಇಲಾಖಾ ಅಧಿಕಾರಿಗಳಿಗೆ ಸೂಕ್ತ ಸೂಚನೆಗಳನ್ನು ನೀಡಲಾಗಿದೆ.